# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2002 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 16/03/2021 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು. |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಲೋಕೋಪಯೋಗಿ ಇಲಾಖೆಯು ರಾಜ್ಯದಲ್ಲಿ ಎಷ್ಟು ಸರ್ಕ್ಯೂಟ್ ಹೌಸ್ ಹಾಗೂ ಪ್ರವಾಸಿ ಮಂದಿರಗಳನ್ನು ನಿರ್ಮಿಸಿದೆ.</td><td>ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯು 4 ವಲಯಗಳ ವ್ಯಾಪ್ತಿಯಲ್ಲಿ ನಿರ್ಮಿಸಿರುವ ಸರ್ಕ್ಯೂಟ್ ಹೌಸ್ ಹಾಗೂ ಪ್ರವಾಸಿ ಮಂದಿರಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ.</th><th>ವಲಯ</th><th>ಸರ್ಕ್ಯೂಟ್ ಹೌಸ್</th><th>ಪ್ರವಾಸಿ ಮಂದಿರ</th></tr>
<tr><td>01</td><td>ದಕ್ಷಿಣ ವಲಯ</td><td>13</td><td>68</td></tr>
<tr><td>02</td><td>ಉತ್ತರ ವಲಯ</td><td>64</td><td>136</td></tr>
<tr><td>03</td><td>ಈಶಾನ್ಯ ವಲಯ</td><td>24</td><td>145</td></tr>
<tr><td>04</td><td>ಕೇಂದ್ರ ವಲಯ</td><td>01</td><td>73</td></tr>
<tr><td colspan="2">ಒಟ್ಟು</td><td>102</td><td>422</td></tr>
</table></td></tr>
<tr><td>ಆ)</td><td>ಸರ್ಕ್ಯೂಟ್ ಹೌಸ್ ನಿರ್ಮಾಣದ ಉದ್ದೇಶಗಳೇನು ?</td><td>ಗಣ್ಯವ್ಯಕ್ತಿಗಳು, ಹಿರಿಯ ಅಧಿಕಾರಿ ವರ್ಗದವರು /ಸಿಬ್ಬಂದಿ ಕಾರ್ಯನಿಮಿತ್ತ ಪ್ರವಾಸದಲ್ಲಿರುವಾಗ ತಾತ್ಕಲಿಕವಾಗಿ ತಂಗಲು ಸರ್ಕ್ಯೂಟ್ ಹೌಸ್ ನಿರ್ಮಾಣ ಮಾಡಲಾಗಿದೆ.</td></tr>
<tr><td>ಇ)</td><td>ಸರ್ಕ್ಯೂಟ್ ಹೌಸ್‌ನ ಕೊಠಡಿಗಳಲ್ಲಿ ಎರಡು ಡಬಲ್ ಬೆಡ್ ಮಂಚ ಇಡಲು ಕಾರಣಗಳೇನು; (ಉದಾ: ಶಿವಮೊಗ್ಗ ಸರ್ಕ್ಯೂಟ್ ಹೌಸ್)</td><td>ಸರ್ಕ್ಯೂಟ್ ಹೌಸ್‌ನ ಕೊಠಡಿಯ ಅಳತೆಗೆ ಅನುಗುಣವಾಗಿ ಹಾಗೂ ಗಣ್ಯವ್ಯಕ್ತಿಗಳು / ಸರ್ಕಾರಿ ಅಧಿಕಾರಿಗಳ ಅನುಕೂಲಕ್ಕಾಗಿ ಡಬಲ್ ಬೆಡ್ ನ್ನು ಒದಗಿಸಲಾಗಿರುತ್ತದೆ.</td></tr>
<tr><td>ಈ)</td><td>ಯಾವುದೇ ಕಟ್ಟಡದ ವಿನ್ಯಾಸದ ಮೂಲ ಉದ್ದೇಶಗಳೇನು;</td><td>ಅವಶ್ಯಕತೆಗನುಗುಣವಾಗಿ ಮುಖ್ಯ ವಾಸ್ತುಶಿಲ್ಪಿ ರವರು ಸಲ್ಲಿಸುವ ವಿನ್ಯಾಸದಂತೆ ಕಟ್ಟಡವನ್ನು ನಿರ್ಮಾಣ ಮಾಡಲಾಗುತ್ತಿದ್ದು, ಅತ್ಯಂತ ಕಡಿಮೆ ವೆಚ್ಚದಲ್ಲಿ ಅನುಕೂಲಕರವಾಗಿ ಹಾಗೂ ಸುರಕ್ಷಿತವಾಗಿ ನಿರ್ಮಿಸುವುದಾಗಿರುತ್ತದೆ.</td></tr>
<tr><td>ಉ)</td><td>ಸದರಿ ಉದ್ದೇಶಗಳಿಗೆ ಸದರಿ ವಿನ್ಯಾಸಗಳು ಯಾವ ರೀತಿಯಲ್ಲಿ ಭಂಗವಾಗಿದೆ; (ಸಂಪೂರ್ಣ ವಿವರ ಒದಗಿಸುವುದು)</td><td>ರಾಜ್ಯದಲ್ಲಿ ನಿರ್ಮಿಸಲಾಗಿರುವ ಸರ್ಕ್ಯೂಟ್ ಹೌಸ್ ಹಾಗೂ ಪ್ರವಾಸಿ ಮಂದಿರಗಳ ಕಟ್ಟಡಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದಿತ ವಿನ್ಯಾಸದಂತೆ, ನಿರ್ಮಿಸಲಾಗುತ್ತಿದ್ದು, ಯಾವುದೇ ರೀತಿಯ ಭಂಗ ಉಂಟಾಗಿರುವುದಿಲ್ಲ.</td></tr>
</table>

| | | |
|---|---|---|
| ಊ) | ಸರ್ಕ್ಯೂಟ್ ಹೌಸ್, ಸರ್ಕಾರಿ ವೈದ್ಯಕೀಯ ಕಾಲೇಜುಗಳ ಪೋರ್ಟಿಕೋಗಳ ಮೇಲೆ ಅಂಟುವ ಜೇಡರಬಲೆ ಹಾಗೂ ಧೂಳನ್ನು ಯಾವ ರೀತಿ ಮತ್ತು ಎಷ್ಟು ದಿನಗಳಿಗೊಮ್ಮೆ ಸ್ವಚ್ಛಗೊಳಿಸುವ ಉದ್ದೇಶ, ವಿನ್ಯಾಸ ಹೊಂದಿದೆ? (ವಿವರ ಒದಗಿಸುವುದು) | ಸರ್ಕ್ಯೂಟ್ ಹೌಸ್‌ಗಳ ನಿರ್ವಹಣೆಗಾಗಿ ಪ್ರತಿ ವರ್ಷ ವಾರ್ಷಿಕ ನಿರ್ವಹಣೆಗಾಗಿ ಬಿಡುಗಡೆಗೊಳಿಸಲಾದ ಅನುದಾನದಡಿ ನಿರ್ವಹಣೆ ಮಾಡಲಾಗುತ್ತಿದ್ದು, ಕಾಲಕಾಲಕ್ಕೆ ಸ್ವಚ್ಛಗೊಳಿಸಲಾಗುತ್ತಿದೆ. |

(ಸಂಖ್ಯೆ: ಲೋಇ 10 ಬಿಎಲ್ ಕ್ಯೂ 2022)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು.